**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು-ಮಡಿಕೇರಿ**

**SC No. 41/2024**

| | | | |
|---|---|---|---|
| ಸಾಕ್ಷಿದಾರರ ಹೆಸರು | : | **ಶ್ರೀ ಹರೀಶ್** | **PW - 10** |
| ತಂದೆಯ ಹೆಸರು | : | **ಮೊಣಪ್ಪ** | **CW - 8** |
| ವಯಸ್ಸು | : | **30 ವರ್ಷ** | |
| ವೃತ್ತಿ | : | **ಚಾಲಕ** | |
| ವಾಸ | : | **ಪದಕಲ್ಲು ಗ್ರಾಮ, ಚೆಟ್ಟಿಮಾನಿ ಅಂಚೆ, ಮಡಿಕೇರಿ ತಾಲೂಕು** | |

**ಸಾಕ್ಷಿಯನ್ನು ದಿನಾಂಕ 17-04-2025 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**<u>ಮುಖ್ಯವಿಚಾರಣೆ: ಸರ್ಕಾರಿ ಅಭಿಯೋಜಕರಿಂದಃ</u>**

1. ನನಗೆ ಮೃತ ನಂದೀಶ ಮತ್ತು ಆರೋಪಿ ಉತ್ತಪ್ಪ ಇವರ ಪರಿಚಯ ಇರುತ್ತದೆ, ಹಾಗೂ ಪ್ರಾಸಾ-1 ಮತ್ತು ಪ್ರಾಸಾ-2 ರವರ ಪರಿಚಯ ಇದೆ. ಸುಮಾರು ಒಂದು ವರ್ಷದ ಹಿಂದೆ ಪ್ರಾಸಾ-2 ಸೋಮಣ್ಣ ರವರು ತನ್ನ ಮನೆಯ ಹತ್ತಿರ ನನಗೆ ಬರಲು ತಿಳಿಸಿದರು, ನಾನು ಅವರ ಮನೆಗೆ ಹೋದೆನು, ಅವರು ತನ್ನ ಅಣ್ಣನಿಗೆ ಬಿದ್ದು ಏಟಾಗಿದೆ ಎಂದು ಹೇಳಿದರು. ನಾನು ನನ್ನ ಟ್ಯಾಕ್ಸಿ ವಾಹನದಲ್ಲಿ ನಂದೀಶ್ ರವರನ್ನು ಮಡಿಕೇರಿ ಆಸ್ಪತ್ರೆಗೆ ಕರೆದುಕೊಂಡು ಬಂದು ಆಸ್ಪತ್ರೆಯಲ್ಲಿ ಬಿಟ್ಟಿದ್ದೆನು, ನಂತರ ನಂದೀಶ ಮೃತ ಪಟ್ಟ ಬಗ್ಗೆ ಗೊತ್ತಾಗಿರುತ್ತದೆ. ನಂದೀಶ್ ಇವರಿಗೆ ಯಾರು ಹಲ್ಲೆ ಮಾಡಿದರು ಹಾಗೂ ಯಾರು ಕೊಲೆ ಮಾಡಿದರು ಎಂದು ನನಗೆ ಗೊತ್ತಿಲ್ಲ. ಆ ಬಗ್ಗೆ ನಾನು ಯಾವುದೇ ಹೇಳಿಕೆ ಕೊಟ್ಟಿರುವುದಿಲ್ಲ.

**(ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)**

**<u>ಪಾಟೀಸವಾಲು- ಸರ್ಕಾರಿ ಅಭಿಯೋಜಕರಿಂದಃ</u>**

1. ಆರೋಪಿ ಮತ್ತು ಮೃತ ನಂದೀಶ್ ಈತನಿಗೆ ಆಸ್ತಿ ವಿಚಾರದಲ್ಲಿ ವೈಮನಸ್ಸು ಇತ್ತು ಎಂದರೆ ನನಗೆ ಗೊತ್ತಿಲ್ಲ. ದಿನಾಂಕ 25.11.2023 ರಂದು ರಾತ್ರಿ 8.45 ಗಂಟೆಗೆ ಪ್ರಾಸಾ-2 ರವರು ನನಗೆ ಕರೆ ಮಾಡಿ ಆರೋಪಿ ಉತ್ತಪ್ಪನು ನೆಲದ ಮೇಲೆ ಕುಳಿತ ನಂದೀಶನನ್ನು ನಿನ್ನನ್ನು ಸಾಯಿಸದೇ ಬಿಡುವುದಿಲ್ಲ ಎಂದು ಅಲ್ಲೇ ಬಿದ್ದ ಕತ್ತಿಯನ್ನು ತೆಗೆದುಕೊಂಡು ನಂದೀಶನ ತಲೆಗೆ ಹಲ್ಲೆ ಮಾಡಿದರಿಂದ ನಂದೀಶನಿಗೆ ಗಾಯ ಆಗಿರುತ್ತದೆ ಕಾರಣ ಆತನನ್ನು ಆಸ್ಪತ್ರೆಗೆ ದಾಖಲು ಮಾಡಲು ನನ್ನನ್ನು ಬರಲು ತಿಳಿಸಿದರು ಎಂದು ಸೂಚಿಸುವುದು ಸರಿಯಲ್ಲ. ಆ ಬಗ್ಗೆ ನಾನು ಪೊಲೀಸರಿಗೆ ಹೇಳಿಕೆ ನೀಡಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ. ನಾನು ಪೊಲೀಸರ ಮುಂದೆ ಈಗೆ ಓದಿ ಹೇಳಿದಂತೆ "ನಾನು ಈ ಮೇಲಿನ ವಿಳಾಸದಲ್ಲಿ ..................... ನಂದೀಶನ ತಲೆಗೆ ಕಡಿದು ಕೊಲೆ ಮಾಡಿರುತ್ತಾನೆ" ಎಂದು ಹೇಳಿಕೆ ಕೊಟ್ಟಿರುವುದಿಲ್ಲ. ಸದರಿ ಹೇಳಿಕೆಯನ್ನು **ನಿಪಿ-20** ಎಂದು ಗುರುತಿಸಲಾಯಿತು. ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀಸವಾಲು- ಆರೋಪಿ ಪರ ವಕೀಲರಾದ ಶ್ರೀ. ಓ.ಎಸ್.ಸಿ ರವರಿಂದಃ</u>**

ಆರೋಪಿ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿದ್ದರಿಂದ ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**<u>ಮರುವಿಚಾರಣೆಃ</u>** ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು-ಮಡಿಕೇರಿ.